1	2	3
18.	Haveri	624248
19.	Gadag	525594
20.	Bijapur	2287104
21.	Bagalokote	2304346
22.	Uttara Kannada	656509
23.	Gulburga	1619482
24.	Bellary	833238
25.	Raichur	2469354
26.	Koppal	586896
27.	Bidar	863612
	Total :	**47873455**

ಭದ್ರಾವತಿ ಎಂ.ಪಿ.ಎಂ. ಕಾರ್ಖಾನೆಯ ಅರಣ್ಯ ವಿಭಾಗದಲ್ಲಿ ವಾಚರ್ ಹುದ್ದೆಯಲ್ಲಿನ ನೌಕರರನ್ನು ಖಾಯಂಗೊಳಿಸುವುದು

360(652) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಭದ್ರಾವತಿಯ ಎಂ.ಪಿ.ಎಂ.ಕಾರ್ಖಾನೆಯ ಅರಣ್ಯ ವಿಭಾಗದಲ್ಲಿ "ವಾಚರ್" ಹುದ್ದೆಯಲ್ಲಿ ಖಾಯಂ ಆಗದಿರುವ ನೌಕರರ ಸಂಖ್ಯೆ ಎಷ್ಟು;

ಆ. ಸದರಿ ನೌಕರರು ಎಷ್ಟು ವರ್ಷಗಳಿಂದ ದಿನಗೂಲಿ ಮೇಲೆ ನೌಕರಿಯಲ್ಲಿದ್ದಾರೆ;

ಇ. ಈ ನೌಕರರು ಖಾಯಂಗೊಳಿಸಲು ಅನೇಕ ಬಾರಿ ಮನವಿ, ಸತ್ಯಾಗ್ರಹ ನಡೆಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ. ಒಟ್ಟು 513 ಅರಣ್ಯ ಕ್ಷೇತ್ರ ಕಾರ್ಮಿಕರು ಎಂ.ಪಿ.ಎಂ. ಅರಣ್ಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

ಆ. ಈ ಒಟ್ಟು 513 ಜನದಲ್ಲಿ 277 ಜನ 1990 ರಿಂದ ಮತ್ತು 236 ಜನ 1994 ರಿಂದ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ.

ಇ. ಈ ನೌಕರರು ಖಾಯಂಗೊಳಿಸಬೇಕಾಗಿ ಚಳುವಳಿ ನಡೆಸುತ್ತಿರುವುದಾಗಿ ನಿಗಮವು ತಿಳಿಸಿದೆ. ಆದಕ್ಕೆ, ಆರ್ಥಿಕ ಹೊರೆಯಿಂದಾಗಿ ಅರಣ್ಯ ಕ್ಷೇತ್ರ ಕಾರ್ಮಿಕರನ್ನು ಎಂ.ಪಿ.ಎಂ. ವೇತನ ಶ್ರೇಣಿಯಲ್ಲಿ ತರಲಾಗುತ್ತಿಲ್ಲ.